ಆ) ಈ ಬಗ್ಗೆ ಉಪವಿಭಾಗಾಧಿಕಾರಿಯವರಿಂದ ತನಿಖೆಯಾಗಿರುವುದು ನಿಜವೇ?

ಇ) ಉಪವಿಭಾಗಾಧಿಕಾರಿಯವರಿಂದ ತನಿಖೆಗಾಗಿ ಬಂದ ಮೇಲೂ ಆಪಾದಿತರನ್ನು ಅಮಾನತ್ತಿನಲ್ಲಿಡಲು ಕಾರಣವೇನು?

ಶ್ರೀ ಎಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಹೌದು.

ಆ) ಹೌದು.

ಇ) ಈ ಪ್ರಕರಣದಲ್ಲಿ ಆರ್ಥಿಕ ಅವ್ಯವಹಾರದಲ್ಲಿ ಒಂದಕ್ಕಿಂತ ಹೆಚ್ಚು ನೌಕರರು ಒಳಗೊಂಡಿರುವುದರಿಂದ 1957ರ ಕರ್ನಾಟಕ ನಾಗರೀಕ ಸೇನಾ (ಸಿ.ಸಿ.ಎ) ನಿಯಮಗಳ ನಿಯಮ 13ರಂತೆ ಜಂಟಿ ವಿಚಾರಣೆಯಾಗಬೇಕಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಯಾರನ್ನು ಅಮಾನತ್ತಿನಲ್ಲಿಟ್ಟಿಲ್ಲ.

ವಿಷಯ:- ಭೂ ನ್ಯಾಯ ಮಂಡಳಿ ಪ್ರಕರಣಗಳು.

1143 (1945) **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಭೂ ಸುಧಾರಣೆಗೆ ಸಂಬಂಧಪಟ್ಟಂತೆ ಎಷ್ಟು ಪ್ರಕರಣಗಳು ಭೂ ನ್ಯಾಯ ಮಂಡಳಿಯಲ್ಲಿ ಇತ್ಯರ್ಥವಾಗದೇ ಬಾಕಿ ಇವೆ (ಜಿಲ್ಲಾವಾರು ವಿವರ ನೀಡುವುದು).

ಆ) ಹೈಕೋರ್ಟಿನಿಂದ ಭೂ ನ್ಯಾಯಮಂಡಳಿಗೆ ವಾಪಸ್ಸು ಬಂದ ಅರ್ಜಿಗಳೆಷ್ಟು?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಇವೆ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

19,005 ಪ್ರಕರಣಗಳು

1.	ದಕ್ಷಿಣ ಕನ್ನಡ	2127
2.	ರಾಯಚೂರು	460
3.	ಗುಲ್ಬರ್ಗಾ	152
4.	ಮೈಸೂರು	456
5.	ಧಾರವಾಡ	1021
6.	ಹಾಸನ	101
7.	ಕೊಡಗು	29
8.	ಮಂಡ್ಯ	841

9.	ಬೀದರ್	1010
10.	ಚಿಕ್ಕಮಗಳೂರು	115
11.	ತುಮಕೂರು	170
12.	ಕೋಲಾರ	2102
13.	ಬಿಜಾಪುರ	128
14.	ಬೆಳಗಾಂ	1862
15.	ಶಿವಮೊಗ್ಗ	2142
16.	ಚಿತ್ರದುರ್ಗ	194
17.	ಬಳ್ಳಾರಿ	4436
18.	ಕಾರವಾರ	859
19.	ಬೆಂಗಳೂರು (ನಗರ)	511
20.	ಬೆಂಗಳೂರು (ಗ್ರಾಮಾಂತರ)	289
	ಒಟ್ಟು:	19005

ಆ) 22,737 ಪ್ರಕರಣಗಳು

ಇ) 2127 ಪ್ರಕರಣಗಳು ಬಾಕಿ ಇವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

1.	ಕುಂದಾಪುರ	373
2.	ಉಡುಪಿ	700
3.	ಕಾರ್ಕಳ	351
4.	ಮಂಗಳೂರು	40
5.	ಬಂಟ್ವಾಳ	642
6.	ಪುತ್ತೂರು	3
7.	ಬೆಳ್ತಂಗಡಿ	13
8.	ಸೂಳ್ಯ	5
	ಒಟ್ಟು:	2127

ವಿಷಯ:- ತೋಟಗಾರಿಕೆ ಬೆಳೆಗಳಿಗೆ ಸಬ್ಸಿಡಿ ರೂಪದಲ್ಲಿ ತೆಗೆದಿಡಿಸಲಾದ ಹಣ.

1145 (1852) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ)**:-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?